ಬೇಕು? ಕೇಳು ಮಗಳೇ'' ಎಂದು ವಾತ್ಸಲ್ಯದಿಂದ ನುಡಿದರು ಮಹಾರಾಜರು.

''ಅಪ್ಪಾಜಿ, ನಿಮ್ಮನ್ನು ರಕ್ಷಿಸಿದ ಸೋಮೇ ದೇವರಿಗೆ ಇಲ್ಲಿ ವಿರೂಪಾಕ್ಷನಿಗೆ ನಡೆಯುವಂತೆಯೇ ಪೂಜೆ ನಡೆಯಬೇಕು. ಜಾಜಿ, ಚಂಪಕ, ಅಶೋಕ, ಪುನ್ನಾಗ ಪುಷ್ಪಗಳಿಂದ ಮಾಲೆ ಕಟ್ಟಿ ಮುಡಿಸಬೇಕು. ಜರತಾರಿ ವಸ್ತ್ರ ಉಡಿಸಬೇಕು. ಮೂರು ಹೊತ್ತೂ ಭಕ್ಷ್ಯಭೋಜ್ಯಗಳು ಮತ್ತು ಹಣ್ಣುಕಾಯಿಯೊಂದಿಗೆ ಮಹಾ ನೈವೇದ್ಯವಾಗಬೇಕು.''

ಕ್ಷಣಮಾತ್ರ ಆಶ್ಚರ್ಯದಿಂದ ತನ್ನ ಮುದ್ದು ಮಗಳನ್ನು ನೋಡಿದರು ಇಮ್ಮಡಿ ದೇವರಾಯರು. ಅವಳ ಕಣ್ಣುಗಳಲ್ಲಿ ತುಂಬಿದ್ದ ಕಾತರ ಅವರ ಮನಸ್ಸನ್ನು ಮುಟ್ಟಿತು.

''ಅಪ್ಪಣೆ ನನ್ನ ವೀರಪುತ್ರಿ!'' ಮಹಾರಾಜರ ಧ್ವನಿ ಗದ್ಗದಿತವಾಯಿತು.

''ಮಂಗಪ್ಪ ದಣ್ಣಾಯಕರೇ! ಇಂದು ರಾಜಕುಮಾರಿ ವಿರೂಪಾಕ್ಷಿ ದೇವಿಯವರ ಕಟ್ಟಳೆಯಂತೆ ಸೋಮೇ ದೇವರ ಅಂಗ ರಂಗ ಭೋಗಕ್ಕೆ ವಿರೂಪಾಕ್ಷಪುರ ಗ್ರಾಮವನ್ನೂ ದೇವಸಮುದ್ರದ ಹಿರಿಯಕೆರೆಯ ಕೆಳಗಣ ಬೀಜವರಿ ಗದ್ದೆಯನ್ನೂ ಶ್ರೀ ಪರಮೇಶ್ವರ ಪ್ರೀತಿಗಾಗಿ ಧಾರೆಯನ್ನೆರೆದು ಕೊಡುವುದಾಗಿ ಪ್ರಕಟಿಸಿಬಿಡಿ...'' ಎಂದು ಅಪ್ಪಣೆ ಮಾಡಿದರು.

''ಅಪ್ಪಾಜಿ, ಇದು ನಿಮಗಾಗಿ ವಿರೂಪಾಕ್ಷಿ ಮಾಡಿಕೊಂಡ ಹರಕೆ. ವಿರೂಪಾಕ್ಷಪುರವನ್ನ ನಿಮ್ಮ ಹೆಸರಿನಲ್ಲೇ ದೇವರಾಯನಪುರವೆಂದು ಮಾಡಿ ಸೋಮೇ ದೇವರಿಗೆ ಕೊಟ್ಟರೆ ಮತ್ತಷ್ಟು ಶ್ರೇಷ್ಠ, ಅಲ್ಲವೇ?'' ಉತ್ಸಾಹದಿಂದ ಸಲಹೆ ನೀಡಿದನು ರಾಜಕುಮಾರ ಮಲ್ಲಿಕಾರ್ಜುನ.

''ಬರಿ ದೇವರಾಯನಪುರ ಅಲ್ಲ ಅಣ್ಣ! ಅಪ್ಪಾಜಿಯವರು ಪದೇ ಪದೇ ವಿಜಯ ಗಳಿಸುವುದರಿಂದ ವಿರೂಪಾಕ್ಷಪುರ ಗ್ರಾಮವನ್ನ ವಿಜಯದೇವರಾಯನಪುರ ಎಂದು ಮಾಡುವುದು ಇನ್ನೂ ಸೂಕ್ತ ಅಲ್ಲವೇ'' ಇಮ್ಮಡಿ ಉತ್ಸಾಹದಿಂದ ನುಡಿದಳು ವಿರೂಪಾಕ್ಷಿ.

ಇಮ್ಮಡಿದೇವರಾಯರು ಮಕ್ಕಳ ಸಲಹೆಯನ್ನು ಒಪ್ಪಿಕೊಂಡವರಂತೆ ಹೆಮ್ಮೆಯಿಂದ ಇಬ್ಬರನ್ನೂ ತಮ್ಮ ಎರಡೂ ಬಾಹುಗಳಲ್ಲಿ ಬಳಸಿದರು.

''ಇದು ಒಳ್ಳೆ ಯೋಚನೆ. ರಾಜಕುಮಾರಿ ಹೇಳಿದಂತೆ ಆ ಕೊಡಿಗೆಯನ್ನ ಸೂರೋಪರಾಗ ಪುಣ್ಯಕಾಲದಲ್ಲಿ ಸೋಮೇ ದೇವರಿಗೆ ಧಾರೆಯೆರೆದಲ್ಲಿ ಮಹಾರಾಜರಿಗೆ ಆಯುರಾರೋಗ್ಯ ಐಶ್ವರ್ಯ ವೃದ್ಧಿಯಾಗುವುದು ಖಚಿತ!'' ಎಂದು ಶುಭ ನುಡಿದರು ಆಸ್ಥಾನ ಜ್ಯೋತಿಷಿ.

ಅನಂತರ –

ದೇವರಾಯ ಮಹಾರಾಯರ ಸಮುಖದ ನಿರೂಪದಿಂದ ಸಕನಸಮುದ್ರದ ಒಳಗಣ ಊರ ಮುಂದಣ ಶ್ರೀಮನ್ ಮಹಾಪ್ರಧಾನಿ ಮಂಗಪ್ಪ ದಣ್ಣಾಯಕರ ಪುತ್ರರಾದ ಪ್ರತಾಪ ರಾಯರು ಸೂರೋಪ ಪುಣ್ಯ ಕಾಲದಲ್ಲಿ ಮಹಾರಾಜರು ಸೋಮೇ ದೇವರಿಗೆ ಧಾರೆ ಎರೆದು ಕೊಟ್ಟ ಕೊಡಿಗೆಯ ಬಗ್ಗೆಗಿನ ಧರ್ಮ ಶಾಸನವನ್ನು ಪ್ರಕಟಿಸಿ, ನಂತರ ಕಲ್ಲಿನಲ್ಲಿಯೂ ಕೆತ್ತಿಸಿ ಸ್ಥಾಪಿಸಿದರು.


**ಚಿತ್ರಾ ರಾಮಚಂದ್ರನ್**

ಕನ್ನಡ, ತಮಿಳು, ಇಂಗ್ಲಿಷ್‌ನಲ್ಲಿ ಬರೆಯುವ ಚಿತ್ರಾ ಅವರ ಬರಹಗಳು ಜನಪ್ರಿಯ ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ತಮ್ಮ ಸಹೋದರಿ ವಿದ್ಯಾ ಅವರೊಂದಿಗೆ ಮಕ್ಕಳಿಗಾಗಿ ಕನ್ನಡ ಕೃತಿಗಳನ್ನು ರಚಿಸಿದ್ದಾರೆ. 'ಕೀರ್ತಿನಿಧಿ ಕೇಸರಿ ಸಿಂಘ' ಅವರ ಐತಿಹಾಸಿಕ ಕಾದಂಬರಿ. 'ಫುಡ್ ಬ್ಲಾಗರ್' ಆಗಿಯೂ ಗುರ್ತಿಸಿಕೊಂಡಿರುವ ಅವರು, ಯುವ ಓದುಗರಿಗಾಗಿ ಶಾಸನಗಳನ್ನು ಆಧರಿಸಿ ಕಥೆಗಳನ್ನು ಹೆಣೆಯುತ್ತಿದ್ದಾರೆ.